# ರಜನಿ ರುಜು

'ಭೂಮಂತರ್' ಸಿನಿಮಾದ ಮೋಗರಾ ಪಾತ್ರದಲ್ಲಿ ಮಿಂಚಿರುವ ನಟಿ ರಜನಿ ಭಾರದ್ವಾಜ್, ಮಾಡೆಲಿಂಗ್ ಮೂಲಕ ಸಿನಿಮಾರಂಗಕ್ಕೆ ಬಂದವರು. ಆ್ಯಕ್ಷನ್ ಬೋರು, ರಾಮ್‌ಕಾಮ್ ಇಷ್ಟ ಎನ್ನುವ ರಜನಿ, ಮತ್ತೆರಡು ಸಿನಿಮಾಗಳಲ್ಲಿ ಬ್ಯುಸಿ.

■ ಸುಮಲತಾ ಎನ್.



'ನಂಗೆ ಕ್ಯಾಮೆರಾ ಅಂದ್ರೆ ತುಂಬಾ ಇಷ್ಟ. ಕ್ಯಾಮೆರಾ ಮುಂದೆ ಬರೋಕೆ ಯಾವತ್ತೂ ಭಯ ಆಗಿಲ್ಲ. ಸುಮ್ಮನೆ ಅದರ ಮುಂದೆ ನಿಂತರೆ ಸಾಕು, ನಟನೆ ತಾನಾಗೇ ಬಂದುಬಿಡುತ್ತೆ...'

ಪಟಪಟನೆ ಮಾತಾಡುವ ನಟಿ ರಜನಿ ಭಾರದ್ವಾಜ್ ಅವರಲ್ಲಿನ ಈ ಕ್ಯಾಮೆರಾ ಪ್ರೀತಿಯೇ ನಟನೆಯೆಡೆಗೆ ಅವರಲ್ಲಿ ಒಲವು ಬೆಳೆಯುವಂತೆ ಮಾಡಿರುವುದು. ಮೈಸೂರಿನಲ್ಲಿ ಹುಟ್ಟಿ ಬೆಳೆದ ರಜನಿ ಅವರಿಗೆ ಕಾಲೇಜು ಓದುವಾಗಲೇ ಕ್ಯಾಮೆರಾ ಮುಂದೆ ಕಾಣಿಸಿಕೊಳ್ಳುವ ಆಸೆ ಹುಟ್ಟಿಕೊಂಡಿತ್ತು. ಚೆನ್ನಾಗಿ ಕಾಣಿಸಬೇಕು, ಡಾನ್ಸ್ ಮಾಡಬೇಕು, ಕ್ಯಾಮೆರಾ ಮುಂದೆ ಬರಬೇಕು ಎಂದೇ ಮಾಡೆಲಿಂಗ್ ಸಖ್ಯವನ್ನೂ ನೆಚ್ಚಿಕೊಂಡರು. ಮಾಡೆಲಿಂಗ್ ಮಾಡುತ್ತಲೇ ಜಾಹೀರಾತುಗಳಲ್ಲಿಯೂ ಕಾಣಿಸಿಕೊಂಡರು.

2013ರಲ್ಲಿ 'ಮಿಸ್ ಕರ್ನಾಟಕ' ಕಿರೀಟ ಮುಡಿಗೇರಿದ್ದು, ಅವರೊಳಗಿನ ನಟನೆಯ ಬಯಕೆ ದುಪ್ಪಟ್ಟಾಗಲು ಕಾರಣ. ಕಾಲೇಜಿನಲ್ಲಿದ್ದಾಗಲೇ ಸಿನಿಮಾ ಅವಕಾಶಗಳೂ ಬರಲಾರಂಭಿಸಿದವು. ಆದರೆ ಮನೆಯಲ್ಲಿ ಶಿಕ್ಷಣದ ಬಗ್ಗೆ ಕಟ್ಟುನಿಟ್ಟಾಗಿದ್ದ ಕಾರಣ ಅವಕಾಶ ಕೈಬಿಟ್ಟು ಎಂಬಿಎ ಹಾದಿ ಹಿಡಿದರು.

'ನಟನೆಗೆ ಬರಲೇಬೇಕೆಂಬ ಯೋಜನೆ ಇರಲಿಲ್ಲ. ಆದರೆ ಓದೋದಕ್ಕಿಂತ ಡ್ರಾಮಾ, ನೃತ್ಯದಲ್ಲೇ ತುಂಬಾ ತೊಡಗಿಕೊಂಡಿರುತ್ತಿದ್ದೆ. ಅವಕಾಶ ಸಿಕ್ಕರೆ ಕ್ಲಾಸ್ ಬಂಕ್ ಮಾಡಿ ಕಾಲೇಜ್ ಫೆಸ್ಟಿವಲ್‌ಗಳಿಗೆ ಹೋಗಿಬಿಡುತ್ತಿದ್ದೆ. ಮಾಡೆಲಿಂಗ್ ಎಂದರೆ ತುಂಬಾ ಇಷ್ಟ ಇತ್ತು. ಕ್ಯಾಮೆರಾ ಬಗ್ಗೆ ಪ್ಯಾಷನೇಟ್ ಆಗಿದ್ದೆ' ಎಂದು ನಗುತ್ತಾರೆ ರಜನಿ.

ಎಂಬಿಎ ಮುಗಿಯುತ್ತಿದ್ದಂತೆ 'ಮಟಾಶ್' ಸಿನಿಮಾ ಮೂಲಕ ಸಿನಿಮಾರಂಗದ ಪರಿಚಯ ಆಗಿತ್ತು. ಕೊರೊನಾ ನಂತರ 'ರಾಣಾ' ಸಿನಿಮಾದಲ್ಲಿ ನಟಿಸಿದ ಅವರು, ಈಚೆಗೆ ನಟ ಶರಣ್ ಜೊತೆ 'ಛೂಮಂತರ್' ಸಿನಿಮಾದಲ್ಲಿ ಅಭಿನಯಿಸಿದ್ದಾರೆ. ಈ ಸಿನಿಮಾದಲ್ಲಿನ ತಮ್ಮ ಪಾತ್ರ ಜನಮನ್ನಣೆ ಪಡೆದಿದ್ದಾಗಿಯೂ ಹೇಳುತ್ತಾರೆ.

"ಛೂಮಂತರ್ ಸಿನಿಮಾದಲ್ಲಿ ಜನ ನನ್ನ ಪಾತ್ರವನ್ನು ತುಂಬಾ ಇಷ್ಟಪಟ್ಟಿದ್ದಾರೆ. ಆ್ಯಕ್ಷನ್, ಪ್ಯಾನ್ ಇಂಡಿಯಾ ಎಂಬ ಸೂತ್ರಗಳ ಹೊರತಾಗಿ ಒಳ್ಳೆಯ ಕಂಟೆಂಟ್ ಇರುವ ಸಿನಿಮಾ ಎಲ್ಲಾ ವಯೋಮಾನದವರಿಗೂ ಇಷ್ಟವಾಗುತ್ತಿದೆ. ನನ್ನ ಪಾತ್ರ ಮೋಗರಾ ಜನಕ್ಕೆ ಹಿಡಿಸಿದೆ. ಜನರು ನನ್ನನ್ನು ಮೋಗರಾ ಎಂದೇ ಕರೆಯುತ್ತಿದ್ದಾರೆ" ಎಂದು ಖುಷಿಯಿಂದ ಹೇಳಿಕೊಳ್ಳುತ್ತಾರೆ.

ಸಿನಿಮಾರಂಗಕ್ಕೆ ಬರದೇ ಹೋದರೆ ಏನಾಗುತ್ತಿದ್ದಿರಿ ಎಂಬ ಪ್ರಶ್ನೆ ಮುಂದಿಡುತ್ತಿದ್ದಂತೆ, 'ಖಂಡಿತ 9–5 ಕೆಲಸ ಮಾಡುತ್ತಿರಲಿಲ್ಲ. ಅದು ಎಂದಿಗೂ ನನ್ನ ಜಾಯಮಾನಕ್ಕೆ ಒಪ್ಪದ್ದು. ಸಿನಿಮಾರಂಗಕ್ಕೆ ಬರದೇ ಇದ್ದರೆ ನಾನು ಯೋಗ ತರಬೇತಿ ನೀಡುತ್ತಿದ್ದೆ. ಯೋಗ ಸ್ಟುಡಿಯೊ ಮಾಡಿ ಜನರಿಗೆ ಯೋಗ ಹೇಳಿಕೊಡುತ್ತಿದ್ದೆ. ಆಫೀಸಲ್ಲಿ ಕಂಪ್ಯೂಟರ್ ಮುಂದೆ ಕುಳಿತುಕೊಳ್ಳೋಕೆ ನಾನಂತೂ ರೆಡಿ ಇಲ್ಲ' ಎಂದು ಚುಟುಕಾಗಿ ಉತ್ತರ ಹೇಳಿ ಮುಗಿಸುತ್ತಾರೆ.

ಈಗಷ್ಟೇ ಸಿನಿಮಾರಂಗದಲ್ಲಿ ತಮ್ಮ ಹಾದಿ ತೆರೆದುಕೊಳ್ಳುತ್ತಿದೆ ಎನ್ನುವ ರಜನಿ ಅವರಿಗೆ ಹೊಸಬರಿಗಿದ್ದಂತೆ, ಎಲ್ಲ ರೀತಿಯ ಪಾತ್ರಗಳನ್ನೂ ಪ್ರಯತ್ನಿಸಬೇಕೆಂಬ ಹುಮ್ಮಸ್ಸಿದೆ. ಆ್ಯಕ್ಷನ್ ಬೋರು ಎಂದು ನಗುವ ಅವರಿಗೆ ರಾಮ್‌ಕಾಮ್, ಅಂದರೆ ರೊಮ್ಯಾಂಟಿಕ್ ಕಾಮಿಡಿ ಸಿನಿಮಾ ಕಥೆಗಳು ಫೇವರೆಟ್. ಸದ್ಯ ಸೃಜನ್ ಲೋಕೇಶ್ ಅವರೊಂದಿಗೆ 'ಜಿಎಸ್‌ಟಿ' ಹಾಗೂ ಪ್ರಿಯಾಂಕಾ ಉಪೇಂದ್ರ ಅವರೊಂದಿಗೆ 'ಕಮರೊಟ್ಟು' ಸಿನಿಮಾದಲ್ಲಿ ರಜನಿ ಅಭಿನಯಿಸಿದ್ದು, ಎರಡೂ ಸಿನಿಮಾಗಳು ಬಿಡುಗಡೆಗೆ ಸಿದ್ಧವಾಗಿವೆ. ■